6) ದ್ವಿತಳಿ ರೇಷ್ಮೆ ಬೆಳೆಗಾರರಿಗೆ ಹುಳು ಸಾಕಾಣಿಕೆ ಸಲಕರಣೆಗಳ ಖರೀದಿಗೆ ಸಹಾಯಧನ ನೀಡುವುದು.

7) ದ್ವಿತಳಿ ರೇಷ್ಮೆ ಬೆಳೆಗಾರರಿಗೆ ಸೋಂಕು ನಿವಾರಕಗಳ ಸರಬರಾಜು ಮಾಡುವುದು.

8) ಮಲ್ಟಿಎಂಡ್ ಘಟಕ ಸ್ಥಾಪನೆಗೆ ಸಹಾಯಧನ ನೀಡುವುದು.

9) ಮಲ್ಟಿಎಂಡ್ ದ್ವಿತಳಿ ರೇಷ್ಮೆಗೆ ಪ್ರೋತ್ಸಾಹಧನ ನೀಡುವುದು

10) ಗೂಡಿನ ಗುಣಮಟ್ಟ ಮಾಪನ / ಕಚ್ಚಾ ರೇಷ್ಮೆ ಪರೀಕ್ಷಾ ಸಲಕರಣೆಗಳ ಖರೀದಿಗೆ ಸಹಾಯಧನ ನೀಡುವುದು.

11) ವಿಸ್ತರಣೆ ಮತ್ತು ಪ್ರಚಾರ ಸಾಹಿತ್ಯ ಮುದ್ರಣ ಮಾಡುವುದು.

12) ರೇಷ್ಮೆ ಗೂಡಿಗೆ ಪ್ರೋತ್ಸಾಹಧನ ನೀಡುವುದು.

ಈ) ಸಿಡಿಪಿ ಕಾರ್ಯಕ್ರಮದಡಿ ರೂ. 1207.87 ಲಕ್ಷಗಳ ಸಹಾಯಧನ ಹಾಗೂ ರೇಷ್ಮೆ ಗೂಡಿಗೆ ಪ್ರೋತ್ಸಾಹಧನ ಕಾರ್ಯಕ್ರಮದಡಿ ರೂ. 961.78 ಲಕ್ಷಗಳನ್ನು ನೀಡಲಾಗಿದೆ.

ಕಾಗವಾಡ ಮತಕ್ಷೇತ್ರದಲ್ಲಿ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಕಾರ್ಯ ವಿಳಂಬವಾಗುತ್ತಿರುವುದು.

3633(4367) ಶ್ರೀ ಭರಮಗೌಡ ಆ ಕಾಗೆ (ಕಾಗವಾಡ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಾಗವಾಡ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಅಥಣಿ ತಾಲ್ಲೂಕಿನ ಶಡ್‌ಬಾಳ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಏತ ನೀರಾವರಿ ಮೊತ್ತ ರೂ. 63.18 ಲಕ್ಷಕ್ಕೆ ಆಡಳಿತಾತ್ಮಕ ಮಂಜೂರಾತಿ ದೊರಕಿದೆಯೇ; ಸದರಿ ಯೋಜನೆಯು ಯಾವ ಹಂತದಲ್ಲಿದೆ; ಇದುವರೆವಿಗೂ ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ;

ಆ) ಸದರಿ ಯೋಜನೆ ಮಂಜೂರಾತಿಯಾಗಿ ಸುಮಾರು ಒಂದೂವರೆ ವರ್ಷ ಗತಿಸಿದ್ದರೂ ಅರ್ಹ ಫಲಾನುಭವಿಗಳು ವಂಚಿತರಾಗಿರುವುದರಿಂದ ಇದನ್ನು ಕೂಡಲೇ ಅನುಷ್ಠಾನಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಮತ್ತು ಆ) ಅಥಣಿ ತಾಲ್ಲೂಕಿನ ಶೆಡ್ಬಾಳ್ ಗ್ರಾಮದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಏತ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಲು ರೂ. 63.18 ಲಕ್ಷಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿತ್ತು. ಆದಾಗ್ಯೂ ಸದರಿ ಯೋಜನೆಯಡಿ ಅನುದಾನ ಲಭ್ಯವಿಲ್ಲದ ಕಾರಣ ಗಿರಿಜನ ಉಪಯೋಜನೆಯಡಿ ಅನುಷ್ಠಾನಗೊಳಿಸಲು ಸದರಿ ಪ್ರಸ್ತಾವನೆಯನ್ನು ಮುಖ್ಯ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಉತ್ತರ ವಲಯ ಬಿಜಾಪುರ ರವರಿಗೆ ದಿನಾಂಕ 10-6-2003 ರಂದು ಕಳುಹಿಸಲಾಗಿದೆ.

ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು ಉತ್ಪಾದನೆ ಮಾಡುವ ಸಕ್ಕರೆ ಹಾಗೂ ಕಬ್ಬಿನಿಂದ ಉತ್ಪಾದಿಸುವ ಮದ್ಯಸಾರ

3634(4377) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?